# ಲೇಕ್ ಮೆಲಿಸ್ಸಾನಿ

## ಗ್ರೀಕ್ ದಂತಕಥೆಯ 'ಅಪ್ಸರಾಕೊಂಡ'



■ ಎಸ್.ಪಿ. ವಿಜಯಲಕ್ಷ್ಮಿ

ಮ್ಯೂನಿಕ್‌ನಿಂದ ಎಂಟು ದಿನದ ಕ್ರೂಸ್ ಪ್ರವಾಸ ನಿಗದಿ ಆದಾಗ ನನಗೇನೋ ಅಷ್ಟೊಂದು ಆಸಕ್ತಿ ಹುಟ್ಟಿರಲಿಲ್ಲ. ಆದರೆ ಒಮ್ಮೆ ಹಡಗಿನಲ್ಲಿ ಕೂತ ಮೇಲೆ ಒಂದೊಂದು ದಿನವೂ ಉಂಟಾದ ಅನುಭವ ಅವರ್ಣನೀಯ. ಸುಸಜ್ಜಿತ ಹಡಗಿನಲ್ಲಿ 8 ದಿನದ ಪ್ರವಾಸ ಗ್ರೀಸ್, ಟರ್ಕಿ ಮತ್ತು ಇಟಲಿಯ ಕೆಲವು ಅಪೂರ್ವ ತಾಣಗಳಿಗೆ. ಈ ಪ್ರವಾಸದ ವಿಶೇಷವೆಂದರೆ, ಈ ಹಡಗು ಮೇಲೆ ಹೇಳಿದ ದೇಶಗಳ ಬಂದರಿನಲ್ಲಿ ಬೆಳಿಗ್ಗೆ ನಿಲ್ಲುತ್ತದೆ; ಇಲ್ಲಿಂದ ನಾವು ಹತ್ತಿರದಲ್ಲಿರುವ ಊರುಗಳ ವಿಶೇಷ ಸ್ಥಳಗಳ 'ಸೈಟ್ ಸೀಯಿಂಗ್' ಬುಕ್ ಮಾಡಿಕೊಂಡು ಹೋಗಿ, ಅಲ್ಲಿಯ ವೈಶಿಷ್ಟ್ಯವನ್ನು ಕಂಡು, ಸಂಜೆ ಆರರೊಳಗೆ ಹಡಗಿನೊಳಗೆ ಸೇರಬೇಕು, ಮನೆ ಸೇರುವಂತೆ. ಯಾಕೆಂದರೆ, ಏಳು ದಿನಗಳಿಗೆ ಹಡಗೇ ನಮ್ಮ ಮನೆಯಾಗಿರುತ್ತದೆ ಮತ್ತು ಸಂಜೆ ತನ್ನ ಮರುಪಯಣ ಆರಂಭಿಸುವ ಹಡಗು ಮುಂದಿನ ಗುರಿಯೆಡೆ ರಾತ್ರಿಯೆಲ್ಲ ಜಲಯಾನ ಮಾಡುತ್ತಾ ಹೊರಟ ಮೇಲೆ ನಮ್ಮ ಆಟ, ಊಟ, ವಿನೋದ, ಬೆರಗು ಎಲ್ಲ ಹಡಗಿನ ಹೊಟ್ಟೆಯೊಳಗೇ...

ಈ ಎಂಟು ದಿನಗಳ ಪ್ರವಾಸದ ಗುರಿ ಮೆಡಿಟರೇನಿಯನ್ ಉತ್ತರ ಭಾಗದ ಮನ್ಫಾಲ್ಕೋನೆ (Monfalcone) ಊರಿನ ಬಂದರಿನಿಂದ ಮೂರು ದೇಶಗಳ ವಿಶೇಷ ಕಾಣುವುದಾಗಿತ್ತು. ಇಲ್ಲಿ ನಾವು ಹೋಗುವ, ನೋಡುವ ಎಲ್ಲ ನಗರಗಳೂ ಮೆಡಿಟರೇನಿಯನ್, ಏಡ್ರಿಯಾಟಿಕ್ ಮತ್ತು ಏಜಿಯನ್ ಸಮುದ್ರಗಳ ಒಡಲಲ್ಲಿ ತುಂಬಿಕೊಂಡಿರುವ ದ್ವೀಪನಗರಿಗಳು... ಹಾಗಾಗಿ ನಮ್ಮ ಒಡನಾಟ ನೆಲದೊಂದಿಗೆ ಜಲಕ್ಕೂ ಅಂಟಿಕೊಂಡೇ ಇರುವುದು ಇನ್ನಷ್ಟು ಸಡಗರದ ಸಂಗತಿ... ಹೀಗೆ ಈ ಯಾನದಲ್ಲಿ ಕಂಡ ಅಪರೂಪದ ಭೂತುಣುಕು, ಗ್ರೀಸ್ ದೇಶದ ಕೆಫಲೋನಿಯಾ ದ್ವೀಪದ ಅಪ್ಸರಾಕೊಂಡ, 'ಲೇಕ್ ಮೆಲಿಸ್ಸಾನಿ'.

### ಅಪ್ಸರಾಕೊಂಡ, ಕೇವ್ ಆಫ್ ದಿ ನಿಂಫ್ಸ್, ಲೇಕ್ ಮೆಲಿಸ್ಸಾನಿ

'ಕೆಫಲೋನಿಯಾ' ಎನ್ನುವುದು ಐಯೋನಿಯನ್ ಸಮುದ್ರದಿಂದ ಆವರಿಸಿರುವ ಗ್ರೀಸ್ ದೇಶದ ಮೈನ್ ಲ್ಯಾಂಡ್‌ನಲ್ಲಿರುವ ಒಂದು ಸುಂದರ ಮತ್ತು ದೊಡ್ಡ ದ್ವೀಪ. ಇಲ್ಲಿಯ 'ಸಾಮಿ' ಎನ್ನುವ ಟೌನ್, ಅಲ್ಲಿಗೆ ಹೋಗುವ ಹಾಗೂ ಸುತ್ತಮುತ್ತಲ ಎತ್ತರದ ಪರ್ವತಶ್ರೇಣಿ, ಅದನ್ನಾವರಿಸಿದ ದಟ್ಟ ಕಾಡು, ಒಂದು ಬದಿ ನಮ್ಮ ಜೊತೆಗೇ ಹರಿದು ಬರುವ ದಟ್ಟ ನೀಲವರ್ಣದ ಸಮುದ್ರ, ಅಲ್ಲಲ್ಲಿ ಸಿಗುವ, ಚಿತ್ರದಲ್ಲಿ ಬರೆದಂಥ ಪುಟ್ಟ ದಿವಿನಾದ ಶುಭ್ರ ಹಳ್ಳಿಗಳು, ನಂತರ ಕಾಡಿನ ನಡುವೆ ಕಂಡ ಪುರಾತನ 'ಸ್ಟಾಲಸ್ಟೈಟ್'ಗಳ ಗುಹಾಲೋಕ ಭೇಟಿಯಾಗಿ, ನಂತರದಲ್ಲಿ ಕಂಡ 'ಮೆಲಿಸ್ಸಾನಿ' ಎನ್ನುವ ಗ್ರೀಕ್ ದಂತಕಥೆಯ ಅದ್ಭುತ ವರ್ಣಗಳ ಲೇಕ್ ದಂಗುಬಡಿಸಿಬಿಟ್ಟಿತು.

ಹೌದು, 'ಮೆಲಿಸ್ಸಾನಿ', 'ಕೇವ್ ಆಫ್ ದಿ ನಿಂಫ್ಸ್' ಭೂಲೋಕದ ಒಂದು ಅಚ್ಚರಿಯ ಲೇಕ್. 300 ವರ್ಷಗಳ ಹಿಂದೆ ಸಂಭವಿಸಿದ ಭೂಕಂಪದ ಕಾರಣ ಲೋಕದ ಕಣ್ಣಿಗೆ ಬಿದ್ದ ಗ್ರೀಸ್ ದೇಶದ ಸಾವಿರಾರು ವರ್ಷಗಳ ಹಿಂದೆ ರೂಪುಗೊಂಡ ಅಪರೂಪದ ಲೇಕ್; ಪ್ರಾಕೃತಿಕ ಸುಣ್ಣಕಲ್ಲಿನ ಈ 'ಕೇವ್ ಆಫ್ ದಿ ನಿಂಫ್ಸ್' ಗುಹೆ ಕೆಫಲೋನಿಯಾ ಪ್ರಾಂತ್ಯದ ಸಾಮಿ ನಗರದ ಬಳಿಯ ದಟ್ಟ ಕಾಡಿನ ವೃಕ್ಷಗಳ ಪಾದತಳಿಯಲ್ಲಿ ಹುದುಗಿದ್ದ ಪ್ರಾಚೀನ ಗುಹೆ. ಸಾವಿರಾರು ವರ್ಷಗಳಿಂದ ಲೋಕದ ಕಣ್ಣಿಗೆ ಬೀಳದೆ ಶುದ್ಧವಾಗಿ, ಸ್ಫಟಿಕ ಜಲವನ್ನು ತುಂಬಿಕೊಂಡು ಬೀಗುತ್ತಿದ್ದ ದಂತಕಥೆಯ ಲೇಕ್ ಮತ್ತು ಗುಹೆ. 300 ವರ್ಷಗಳ ಹಿಂದೆ ಇಲ್ಲಿ ಭೂಕಂಪವೊಂದು ಘಟಿಸಿತು. ನೆಲದ ಒಂದಿಪ್ಪತ್ತು ಅಡಿಯಷ್ಟು ಭೂಪದರ ಅದುರಿ, ಕಳಚಿ ನೆಲಮಟ್ಟದಿಂದ 30 ಮೀಟರ್